ಕರ್ನಾಟಕ ಸರ್ಕಾರ

ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ:ಬಿಟಿಇ /05/ಇಎಪಿ/2023

ಆಯುಕ್ತರವರ ಕಛೇರಿ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ಅರಮನೆ ರಸ್ತೆ, ಬೆಂಗಳೂರು-560001
ದೂರವಾಣಿ ಸಂಖ್ಯೆ: 080-22200777

ದಿನಾಂಕ: 24.08.2023

## ಜ್ಞಾಪನ

ವಿಷಯ: ಸಿ20 ಪಠ್ಯಕ್ರಮದಲ್ಲಿ ವ್ಯಾಸಂಗ ಪೂರೈಸಿರುವ ಅರ್ಹ ವಿದ್ಯಾರ್ಥಿಗಳಿಗೆ Provisional Grade Cards ಮತ್ತು Provisional Diploma Certificates (ತಾತ್ಕಾಲಿಕ ಡಿಪ್ಲೋಮಾ ಪ್ರಮಾಣ ಪತ್ರ)ಗಳನ್ನು ಸಂಬಂಧಪಟ್ಟ ಸಂಸ್ಥೆಗಳಲ್ಲಿ ಪರಿಶೀಲಿಸಿ ನೀಡುವ ಕುರಿತು.

ಉಲ್ಲೇಖ:
1. Regulations of Diploma Programme for the curriculum – 2020.
2. ಈ ಕಛೇರಿ ಸುತ್ತೋಲೆ ಸಂಖ್ಯೆ: ಬಿಟಿಇ/08/ಇಸಿಎಸ್(3)/2021, ದಿನಾಂಕ: 26/10/2021.
3. ಈ ಕಛೇರಿ ಸುತ್ತೋಲೆ ಸಂಖ್ಯೆ: ಬಿಟಿಇ/11/ಇಸಿಎಸ್(3)/2021, ದಿನಾಂಕ: 14/10/2022.
4. ಈ ಕಛೇರಿ ಸುತ್ತೋಲೆ ಸಂಖ್ಯೆ: ಬಿಟಿಇ/05/ಇಸಿಎಸ್(1)/2023, ದಿನಾಂಕ: 17/07/2023.
5. ಈ ಕಛೇರಿ ಸುತ್ತೋಲೆ ಸಂಖ್ಯೆ: ಬಿಟಿಇ/05/ಇಸಿಎಸ್(1)/2023, ದಿನಾಂಕ: 20/07/2023.
6. ಈ ಕಛೇರಿ ಸುತ್ತೋಲೆ ಸಂಖ್ಯೆ: ಬಿಟಿಇ/04/ಇಸಿಎಸ್(1)/2023, ದಿನಾಂಕ: 03/06/2023.
7. ಈ ಕಛೇರಿ ಸುತ್ತೋಲೆ ಸಂಖ್ಯೆ: ಬಿಟಿಇ/04/ಇಸಿಎಸ್(1)/2023, ದಿನಾಂಕ: 09/06/2023.

************

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2020-21 ನೇ ಶೈಕ್ಷಣಿಕ ಸಾಲಿನಿಂದ ಜಾರಿಯಲ್ಲಿರುವ C-20 ಪಠ್ಯಕ್ರಮದಲ್ಲಿ ವ್ಯಾಸಂಗ ಪೂರೈಸಿರುವ ಅರ್ಹ ವಿದ್ಯಾರ್ಥಿಗಳಿಗೆ ತಾಂತ್ರಿಕ ಪರೀಕ್ಷಾ ಮಂಡಳಿಯ ಬಿಟಿಇ ಲಿಂಕ್ಸ್ ವೆಬ್ ಪೋರ್ಟಲ್‌ನಲ್ಲಿ ಅಂಕಪಟ್ಟಿಗಳನ್ನು ಮುದ್ರಿಸಿ ಸಂಬಂಧಪಟ್ಟ ವಿಭಾಗಾಧಿಕಾರಿಗಳು ಈ ಕೆಳಕಂಡ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ ದೃಢೀಕರಿಸಿದ ನಂತರ ಪ್ರಿನ್ಸಿಪಾಲರು ಸಹಿ ಹಾಗೂ ಮೊಹರು ಹಾಕಿ ಅರ್ಹ ವಿದ್ಯಾರ್ಥಿಗಳಿಗೆ ನೀಡಲು ಅಗತ್ಯ ಕ್ರಮ ಕೈಗೊಳ್ಳಲು ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ಸಂಸ್ಥೆಗಳ ಪ್ರಾಚಾರ್ಯರುಗಳಿಗೆ ಸೂಚಿಸಲಾಗಿದೆ.

1. ಐ.ಟಿ.ಐ/ಪಿ.ಯು.ಸಿ ಆಧಾರದಲ್ಲಿ ಲ್ಯಾಟರಲ್ ಎಂಟ್ರಿ ಮೂಲಕ ದ್ವಿತೀಯ ವರ್ಷಕ್ಕೆ ಪ್ರವೇಶ ಪಡೆದ ಹಾಗೂ ಪ್ರೋಗ್ರಾಂ ಬದಲಾವಣೆ ಪಡೆದ ವಿದ್ಯಾರ್ಥಿಗಳ ಗ್ರೇಡ್ ಕಾರ್ಡ್‌ಗಳಲ್ಲಿ ನಿಯಮಾನುಸಾರ ಬ್ರಿಡ್ಜ್ ವಿಷಯಗಳು ಮುದ್ರಿಸಲ್ಪಟ್ಟಿರುವ ಬಗ್ಗೆ ಪರಿಶೀಲಿಸುವುದು.
2. ಗ್ರೇಡ್ ಕಾರ್ಡ್‌ಗಳಲ್ಲಿ ನಿಯಮಾನುಸಾರ Audit ವಿಷಯಗಳು ಮುದ್ರಿಸಲ್ಪಟ್ಟಿರುವ ಬಗ್ಗೆ ಪರಿಶೀಲಿಸುವುದು.
3. CIE ಪರೀಕ್ಷೆಯಲ್ಲಿ ಶೇ. 40 ಕ್ಕಿಂತ ಕಡಿಮೆ ಆಂತರಿಕ ಅಂಕಗಳನ್ನು ಪಡೆದು ಅಂತಿಮ ಪರೀಕ್ಷೆಗೆ ಅನರ್ಹಗೊಂಡ (NE) ವಿದ್ಯಾರ್ಥಿಗಳಿಗೆ ತಾಂತ್ರಿಕ ಪರೀಕ್ಷಾ ಮಂಡಳಿಯು ಈ ಕೆಳಗಿನಂತೆ ನಿಗದಿಪಡಿಸಿರುವಂತೆ ಅನ್ವಯವಾಗುವ Makeup CIE ಅವಧಿಗಳಲ್ಲಿ ಮಾತ್ರ ಕಿರುಪರೀಕ್ಷೆಗಳನ್ನು ನಡೆಸಿರುವ ಬಗ್ಗೆ:

- ಉಲ್ಲೇಖ: 2 – 2020-21 ನೇ ಶೈಕ್ಷಣಿಕ ಸಾಲಿಗೆ ಸಂಬಂಧಿಸಿದಂತೆ ದಿನಾಂಕ: 20/11/2021 ರಿಂದ 25/11/2021.
- ಉಲ್ಲೇಖ: 3 – 2020-21 ಮತ್ತು 2021-22 ನೇ ಶೈಕ್ಷಣಿಕ ಸಾಲುಗಳಿಗೆ ಸಂಬಂಧಿಸಿದಂತೆ ದಿನಾಂಕ: 25/10/2022 ರಿಂದ 31/10/2022.
- ಉಲ್ಲೇಖ: 4 – 2020-21 ರಿಂದ 2022-23 ನೇ ಶೈಕ್ಷಣಿಕ ಸಾಲುಗಳಿಗೆ ಸಂಬಂಧಿಸಿದಂತೆ ದಿನಾಂಕ: 10/08/2023 ರಿಂದ 17/08/2023.

4. CIE ಕಿರು ಪರೀಕ್ಷೆಗಳಲ್ಲಿ ಕನಿಷ್ಠ ಶೇ. 40 ಆಂತರಿಕ ಅಂಕಗಳನ್ನು ಪಡೆದು ಅರ್ಹರಾದ ವಿದ್ಯಾರ್ಥಿಗಳು Makeup SEE ಪರೀಕ್ಷೆಯನ್ನು ತಾಂತ್ರಿಕ ಪರೀಕ್ಷಾ ಮಂಡಳಿಯು ನಿಗದಿಪಡಿಸಿದ ದಿನಾಂಕಗಳಲ್ಲಿ ಪರೀಕ್ಷೆ ತೆಗೆದುಕೊಂಡಿರುವ ಬಗ್ಗೆ.
5. SGPA ಮತ್ತು CGPA ಗಳನ್ನು ಗ್ರೇಡ್ ಕಾರ್ಡ್‌ಗಳಲ್ಲಿ ಪರಿಶೀಲಿಸಿ. 6ನೇ ಸೆಮಿಸ್ಟರ್‌ನ ಗ್ರೇಡ್ ಕಾರ್ಡ್‌ನಲ್ಲಿ CGPA ಪ್ರಕಾರ class ನಮೂದಿಸಲಾಗಿರುವ ಬಗ್ಗೆ.

Makeup CIE ನಲ್ಲಿ ಅರ್ಹತೆ ಪಡೆದ ವಿದ್ಯಾರ್ಥಿಗಳ ಆಂತರಿಕ ಅಂಕಗಳನ್ನು ಬಿಟಿಇ ಲಿಂಕ್ಸ್ ಪೋರ್ಟಲ್ ಮೂಲಕ ನಮೂದಿಸುವ ಸಲುವಾಗಿ ಮೂಲ ಆಂತರಿಕ ಅಂಕಗಳ ರಿಜಿಸ್ಟರ್ (ಆಂತರಿಕ ಅಂಕಗಳ ಪರಿವೀಕ್ಷಕರಿಂದ ದೃಢೀಕರಿಸಲ್ಪಟ್ಟದ್ದು) ಆಂತರಿಕ ಅಂಕಗಳ ಪರಿವೀಕ್ಷಕರು ಸಂಸ್ಥೆಯಲ್ಲಿ ನೀಡಿರುವ ಚೆಕ್‌ಲಿಸ್ಟ್ ಮತ್ತು ಅವುಗಳ ದೃಢೀಕೃತ ಪ್ರತಿಯೊಂದಿಗೆ ತಾಂತ್ರಿಕ ಪರೀಕ್ಷಾ ಮಂಡಳಿಗೆ ಖುದ್ದಾಗಿ ಸಲ್ಲಿಸಿ ಪರಿಷ್ಕೃತ ಫಲಿತಾಂಶ ಪಡೆಯಬಹುದಾಗಿದೆ.

ತಾತ್ಕಾಲಿಕ ಡಿಪ್ಲೋಮಾ ಪ್ರಮಾಣ ಪತ್ರಗಳನ್ನು ವಿದ್ಯಾರ್ಥಿಗಳಿಗೆ ನೀಡುವ ಸಲುವಾಗಿ ಮೇಲ್ಕಂಡ ಎಲ್ಲಾ ಅಂಶಗಳನ್ನು ಮತ್ತು ಉಲ್ಲೇಖ: (6) ಮತ್ತು (7) ರಂತೆ ಪರಿಶೀಲಿಸಿ ಅರ್ಹ ವಿದ್ಯಾರ್ಥಿಗಳಿಗೆ ಮಾತ್ರ ನೀಡುವುದು. ಪ್ರಮಾಣ ಪತ್ರದಲ್ಲಿ ದರ್ಜೆ ನೀಡುವಾಗ 6ನೇ ಸೆಮಿಸ್ಟರ್ ಗ್ರೇಡ್ ಕಾರ್ಡ್‌ನಲ್ಲಿನ CGPA ಪ್ರಕಾರ ನೀಡುವುದು.

ಮೇಲ್ಕಂಡ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ ತದನಂತರ ಸಂಬಂಧಪಟ್ಟ ವಿದ್ಯಾರ್ಥಿಗಳಿಗೆ ಅಂಕಪಟ್ಟಿಗಳನ್ನು ವಿತರಿಸುವುದು. ಅಂಕಪಟ್ಟಿಗಳಲ್ಲಿ ಏನಾದರೂ ಲೋಪದೋಷಗಳು ಕಂಡು ಬಂದಲ್ಲಿ, ಕೂಡಲೇ ಅಂತಹ ಅಂಕಪಟ್ಟಿಗಳನ್ನು ತಡೆಹಿಡಿಯುವುದು.

ತಾಂತ್ರಿಕ ಪರೀಕ್ಷಾ ಮಂಡಳಿಯು ನಿಗದಿಪಡಿಸಿರುವ ಅವಧಿಯಲ್ಲಿ Makeup CIE ಕಿರುಪರೀಕ್ಷೆಗಳನ್ನು ನಡೆಸದೆ ಬೇರೆ ಅವಧಿಯಲ್ಲಿ ಸಿ-20 regulations ಗೆ ವ್ಯತಿರಿಕ್ತವಾಗಿ ನಡೆಸಿ ಅಂತಿಮ ಪರೀಕ್ಷೆ (SEE) ತೆಗೆದುಕೊಳ್ಳಲು ವಿದ್ಯಾರ್ಥಿಗಳಿಗೆ ಅವಕಾಶ ನೀಡಿದ್ದಲ್ಲಿ, ಅಂತಹ ಪ್ರಕರಣಗಳಲ್ಲಿ ಸಂಬಂಧಪಟ್ಟ ಆಂತರಿಕ ಅಂಕಗಳ ಪರಿವೀಕ್ಷಕರು, ಪ್ರಾಚಾರ್ಯರು/ವಿಭಾಗಾಧಿಕಾರಿಗಳ ಮೇಲೆ ನಿಯಮಾನುಸಾರ ಶಿಸ್ತು ಕ್ರಮ ಕೈಗೊಳ್ಳಲಾಗುವುದು. ಪ್ರಯುಕ್ತ ಅಂತಹ ಪ್ರಕರಣಗಳನ್ನು ಪಟ್ಟಿ ಮಾಡಿ ಕಾರ್ಯದರ್ಶಿ, ತಾಂತ್ರಿಕ ಪರೀಕ್ಷಾ ಮಂಡಳಿ ಇವರಿಗೆ ವರದಿ ನೀಡಲು ಸೂಚಿಸಲಾಗಿದೆ.

ನಿಯಮಗಳನ್ನು ಪಾಲಿಸದೇ ಯಾವುದೇ ಅನರ್ಹ ವಿದ್ಯಾರ್ಥಿಗಳಿಗೆ Provisional Grade Cards ಮತ್ತು Provisional Diploma Certificates (ತಾತ್ಕಾಲಿಕ ಡಿಪ್ಲೋಮಾ ಪ್ರಮಾಣ ಪತ್ರ)ಗಳನ್ನು ನೀಡಿದ ಸಂಸ್ಥೆಯ ಸಂಬಂಧಪಟ್ಟ ವಿಭಾಗಾಧಿಕಾರಿಗಳು ಮತ್ತು ಪ್ರಾಚಾರ್ಯರನ್ನು ಮುಂದಿನ ಆಗು ಹೋಗುಗಳಿಗೆ ನೇರ ಹೊಣೆಗಾರರನ್ನಾಗಿಸಿ ನಿಯಮಾನುಸಾರ ಶಿಸ್ತು ಕ್ರಮ ಜರುಗಿಸಲಾಗುವುದೆಂದು ತಿಳಿಸಲಾಗಿದೆ.

ಕಾರ್ಯದರ್ಶಿ
ತಾಂತ್ರಿಕ ಪರೀಕ್ಷಾ ಮಂಡಳಿ
24/8/23

ಇವರಿಗೆ,

ರಾಜ್ಯದಲ್ಲಿನ ಎಲ್ಲಾ ಸರ್ಕಾರಿ/ಅನುದಾನಿತ/ಅನುದಾನ ರಹಿತ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರುಗಳು- ಅಗತ್ಯ ಕ್ರಮಕ್ಕಾಗಿ.

ಪ್ರತಿ,

1) ಇ – ಗವರ್ನೆನ್ಸ್ ವಿಭಾಗಕ್ಕೆ – ವೆಬ್‌ಸೈಟ್ ನಲ್ಲಿ ಪ್ರಕಟಿಸಲು
2) ಗಣಕ ಕೇಂದ್ರಕ್ಕೆ - ವೆಬ್ ಪೋರ್ಟಲ್ ನಲ್ಲಿ ಪ್ರಕಟಿಸಲು
3) ಕಾರ್ಯದರ್ಶಿಯವರ ಆಪ್ತ ಶಾಖೆ